ಮಹಾವೀರ ಕಾಸರ, ಶಿವಮೊಗ್ಗ

ಹಾವಿಗೆ ಬಾಯಲ್ಲಿ ವಿಷ; ಚೇಳಿಗೆ ಬಾಲದಲ್ಲಿ ವಿಷ. ಮನುಷ್ಯನಿಗೆ?



ರಕ್ತದಲ್ಲಿ; ಅದು ಹರಿದಲ್ಲೆಲ್ಲ ವಿಷ ಹರಡುತ್ತದೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಏಕೆ ಮತ್ತು ಓಕೆ ನಡುವಿನ ಅಂತರ ಎಷ್ಟು?

ಸರ್ಕಾರಿ ಕಚೇರಿಯಲ್ಲಾದರೆ ಒಂದು ಕಂತೆ ನೋಟಿನಷ್ಟು.

ಬಿ. ಚಂದ್ರೇಗೌಡ, ಬೆಂಗಳೂರು

ಮುತ್ತುರಾಜ ಬಂಗಾರದ ಮನುಷ್ಯನಾಗಿದ್ದು ಹೇಗೆ?

ಗುಬ್ಬಿ ಕಂಪನಿಯ ಚಿನ್ನದಂತಹ ತರಬೇತಿ, ನಿರ್ದೇಶನದ ಫಲ.

ಕೆ.ವಿ. ಗೋವಿಂದಾಚಾರಿ, ಮೈಸೂರು

ಇತ್ತೀಚೆಗೆ ತಾಯಂದಿರು ಶಿಶುಗಳನ್ನು ಕಂಕುಳಲ್ಲಿ ಇಟ್ಟುಕೊಳ್ಳದೆ ತಳ್ಳುವ ಗಾಡಿಯಲ್ಲಿಟ್ಟುಕೊಳ್ಳುವರಲ್ಲ?



ಬಳುಕು ಸೊಂಟಗಳು ಹೆಚ್ಚಾಗಿ ಉಳುಕು ಸೊಂಟಗಳಾಗಿರುವುದೇ ಕಾರಣವಂತೆ.

ರಾಜಶೇಖರ ಹಾದಿಮನಿ, ಧಾರವಾಡ

ಕುಡಿಯುವ ನೀರಿನ ನಳಗಳು ಬಂದ ನಂತರ ಬಾವಿಗಳು ಬತ್ತಿಹೋದವೇಕೆ?

ಜಲ ಹೆಣ್ಣು. ನಿರ್ಲಕ್ಷಿಸಿದರೆ ಬೇರೆಡೆಗೆ ಹೊರಟುಹೋಗುತ್ತದೆ.

ಗಂಜಾಂ ನಾಗರಾಜ್, ಮೈಸೂರು

ಯಾರಾದರೂ ಸತ್ತಾಗ ಸುತ್ತ ಇರುವವರು ಏಕೆ ಅಳುತ್ತಾರೆ?

ವೈದ್ಯನ, ವೈದಿಕರ ಬಿಲ್ ಕಂಡು ಬೆಚ್ಚಿ ಅಳುವರಂತೆ!

ಎನ್.ವಿ. ಶ್ರೀನಿವಾಸ್, ಮೈಸೂರು

ಹಣ್ಣಿನ ತೋಟಗಳಲ್ಲಿ ಕೋತಿಗಳಿಗೆ ಪ್ರವೇಶವಿಲ್ಲ ಎಂದು ಶಾಸನ ವಿಧಿಸಿದರೆ ಅವುಗಳ ಚೇಷ್ಟೆ ನಿಯಂತ್ರಿಸಬಹುದೆ?

ಅಕ್ಷರಸ್ಥ ಕೋತಿಗಳನ್ನು ನಿಯಂತ್ರಿಸಬಹುದು.

ಪಿ.ಎನ್. ಶ್ರೀವತ್ಸ, ಬೆಂಗಳೂರು

ವಿದೇಶದಲ್ಲಿರುವವರು ಈ ವಿಭಾಗಕ್ಕೆ ಪ್ರಶ್ನೆ ಕಳುಹಿಸುತ್ತಿರುವುದು ಶುಭ ಸೂಚನೆಯಲ್ಲವೆ?

ನಿಜ. ಅದು ಸಮಸ್ಯೆಗಳು ಜಾಗತಿಕ ಎಂದು ಸೂಚಿಸುತ್ತದೆ.

ಕೆ.ಸಿ. ಸತ್ಯನಾರಾಯಣ, ದೊಡ್ಡಬಳ್ಳಾಪುರ

ಮಂತ್ರಿಗಳಿಗೆ, ಶಾಸಕರಿಗೆ ನೀತಿಪಾಠ ಹೇಳಿಕೊಡುವುದಕ್ಕೆ ನಿಮಗೆ ಆಹ್ವಾನ ಬಂದರೆ?

ಹೇಳಿಕೊಟ್ಟೇನು, ನಾಯಕರಿಗೆ ಆಗದು ಎಂದು ಹೇಳಿಬಿಡುತ್ತೇನೆ.

ವಿ.ಎಸ್. ಹಿಂದೂಪುರ, ಬಳ್ಳಾರಿ

ಹೆಚ್ಚಾಗಿ ಶ್ರೀಮಂತರೇ ಜಿಪುಣರಾಗಿರುತ್ತಾರೆ. ಏಕೆ?

ಅದು ಹಾಗಲ್ಲ; ಹೆಚ್ಚಾಗಿ ಜಿಪುಣರೇ ಶ್ರೀಮಂತರಾಗುವುದು.

ಬಿ. ಬಸವರಾಜ್, ಹರಿಹರ

ಪ್ರೀತಿ ಕುರುಡು; ಕಾಮಕ್ಕೆ ಕಣ್ಣಿಲ್ಲ. ಕಣ್ಣಿರುವುದು ಯಾವುದಕ್ಕೆ?

ಪ್ರೀತಿಸುವವರು, ಕಾಮಿಗಳು ಓಡಾಡುವಲ್ಲಿರುವ ಸಿಸಿ ಕ್ಯಾಮೆರಾಗಳಿಗೆ.

ಎಂ.ಸಿ. ಧನ್ಯತಾ, ಬೆಂಗಳೂರು

ಸಂಬಂಧಿಕರಲ್ಲಿ ಹಣದ ವ್ಯವಹಾರ ಮಾಡಬಾರದು ಎನ್ನುವುದೇಕೆ?

sum ಅಥವಾ ಬಂಧ; ಇವರೆಡರಲ್ಲಿ ಒಂದನ್ನು ಕೈಬಿಡಬೇಕಾಗುವುದರಿಂದ.

ಕೆ.ಪಿ. ಮಂಜುನಾಥ, ಕೆ.ಟಿ.ಹಳ್ಳಿ

ತಿಮ್ಮಪ್ಪನಿಗೂ, ಹನುಮಂತನಿಗೂ ಇರುವ ವ್ಯತ್ಯಾಸವೇನು?

ತಿಮ್ಮಪ್ಪನಿಗೆ ಶೂನ್ಯಕೇಶರ ದರ್ಶನ ಹೆಚ್ಚು; ಹನುಮನಿಗೆ ಪೂರ್ಣಕೇಶರದು.

## ಬಹುಮಾನಿತ ಪ್ರಶ್ನೆ

ಕೆ.ಎನ್. ಪ್ರಭಾಕರ ಗುಪ್ತ, ಹಾಸನ

ಮರುಮದುವೆಯಾದ ದಂಪತಿಗಳಲ್ಲಿರುವ ಅನ್ಯೋನ್ಯತೆ ಮೊದಲ ಬಾರಿ ಮದುವೆಯಾದಾಗ ಏಕಿರುವುದಿಲ್ಲ?

ಅನುಭವ; ಮರುಲಗ್ನವಾದಾಗ ಪತಿಗೆ ಎಲ್ಲ ಸರಿ ಉತ್ತರಗಳು ಮನದಟ್ಟಾಗಿರುತ್ತವೆ.

ಎಸ್. ವಿಜಯ, ಚೆನ್ನೈ

ಇದುವರೆಗೆ ನಡೆದ ಹೃದಯವಿದ್ರಾವಕ ಘಟನೆಗಳಲ್ಲಿ ಅತಿ ವಿದ್ರಾವಕ ಘಟನೆ ಯಾವುದು?

ದಿನಂಪ್ರತಿ ನಡೆಯುತ್ತಿರುವ ಸಂವಿಧಾನದ ಕೊಲೆ.

ಅನಸೂಯಾ ಟಿ, ಕೇದಿಗೆಮನೆ

ಭೂತ, ಪಿಶಾಚಿಗಳ ಪಾದಗಳು ಹಿಂದುಮುಂದಾಗಿರುತ್ತವಂತೆ. ಹೌದಾ ರಾಮ್?

ಅವು ನರಜನ್ಮಕ್ಕೆ ಹಿಂತಿರುಗಲು ಮಾಡುವ ತೀವ್ರ ಯತ್ನದಿಂದ ತಿರುಚುಪಾದಿ ಆಗುವುವಂತೆ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

ನೀವು ಬೆಳೆಸಿದ ಮರ ನಿಮಗೆ ನೆರಳು ಕೊಡಬಹುದು. ನೀವು ಬೆಳೆಸಿದ ಮಗ?



ಮರೆಯಲಾಗದ ಕ್ಷಣಗಳನ್ನು!

ಜೆ. ಪ್ರದೀಪಕುಮಾರ್, ಹೂವಿನಹಡಗಲಿ

ಹಿಂದಿನ ವಾರಾನ್ನಕ್ಕೂ, ಇಂದಿನ ಸ್ವಿಗ್ಗಿ ಜೊಮ್ಯಾಟೋಗೂ ಏನು ವ್ಯತ್ಯಾಸ?

ಅದು ಮಾನವೀಯತೆಯ ಉತ್ತುಂಗ; ಇದು ಶುದ್ಧ ವ್ಯಾಪಾರ.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ

ನನಗೆ ಪ್ರಾಮಾಣಿಕತೆಯೇ ಮುಳುವಾಗಿದೆ. ಏನು ಮಾಡಲಿ?

ಉಸಿರಾಟವೇ ತೊಂದರೆ ಎಂದು ನಿಲ್ಲಿಸಲಾಗದು. ಇದೂ ಹಾಗೆಯೇ.

■ ರಾಮ್